ಸಿರ್ಸಿ	8	-
ಸಿದ್ದಾಪುರ	5	-
ಯಲ್ಲಾಪುರ	5	-
ಮುಂಡಗೋಡ	2	-
ಹಳಿಯಾಳ	5	-
ಜೋಯಿಡಾ	-	-
	70	1

ಇ) ಖಾಲಿ ಹುದ್ದೆಗಳನ್ನು ಬೇಗ ತುಂಬಲು ಕ್ರಮ ಕೈಗೊಳ್ಳಲಾಗುತ್ತಿದೆ.

ರಾಜ್ಯದಲ್ಲಿ ಬೆಳೆವಿಮಾ ಯೋಜನೆ

1767 - ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ) : ಮಾನ್ಯ ಕೃಷಿ ಮತ್ತು ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ರಾಜ್ಯದಲ್ಲಿ ಬೆಳೆ ವಿಮಾ ಯೋಜನೆಯನ್ನು ಜಾರಿಗೆ ತರಲಾಗಿದೆಯೇ?*

ಆ) *ಹಾಗಿದ್ದಲ್ಲಿ, ಯಾವಾಗಿನಿಂದ ಮತ್ತು ಯಾವ ಯಾವ ಬೆಳೆಗಳಿಗೆ ಈ ವಿಮಾಯೋಜನೆ ಅನ್ವಯಿಸುತ್ತದೆ.*

ಇ) *ಕಳೆದ ಐದು ವರ್ಷಗಳಿಂದ ಈ ಬೆಳೆ ವಿಮಾಯೋಜನೆಯಲ್ಲಿ ರಾಜ್ಯದ ರೈತರು ಒಟ್ಟಾರೆ ಆಗಿರುವ ಪ್ರಯೋಜನವೆಷ್ಟು?*

ಶ್ರೀ ಜಿ.ಪುಟ್ಟಸ್ವಾಮಿಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು):

ಅ) ಹೌದು

ಆ) ಸಮಗ್ರ ಬೆಳೆ ವಿಮಾ ಯೋಜನೆಯು ರಾಜ್ಯದಲ್ಲಿ 1985 ಮುಂಗಾರು ಹಂಗಾಮಿನಿಂದ ಜಾರಿಯಲ್ಲಿರುತ್ತದೆ. ಈ ಯೋಜನೆ ಯಡಿಯಲ್ಲಿ ಬರುವ ಬೆಳೆಗಾಳಾವುವೆಂದರೆ ಭತ್ತ, ಜೋಳ, ಗೋಧಿ, ರಾಗಿ, ಮುಸುಕಿನ ಜೋಳ, ಸಜ್ಜೆ, ತೊಗರಿ, ಕಡಲೆ, ಶೇಂಗಾ ಸೂರ್ಯಕಾಂತಿ ಮತ್ತು ಕುಸುಮೆ.

ಇ) ಕಳೆದ ಐದುವರ್ಷಗಳಿಂದ (1985 - 86 ರಿಂದ 89 - 90ರವರೆಗೆ) 1.61 ಲಕ್ಷ ರೈತರು 14.86 ಕೋಟಿ ರೂ. ಗಳನ್ನು ನಷ್ಟ ಪರಿಹಾರ ಧನವನ್ನು ಪಡೆದು ಈ ಯೋಜನೆಯ ಪ್ರಯೋಜನವನ್ನು ಪಡೆದಿರುತ್ತಾರೆ.

ರಾಜ್ಯದಲ್ಲಿ ಖಾಲಿ ಇರುವ ತಹಶೀಲ್ದಾರ್, ವಿಶೇಷ ತಹಶೀಲ್ದಾರ್ ಹಾಗೂ ಸಬ್‌ರಿಜಿಸ್ಟ್ರಾರ್ ಹುದ್ದೆಗಳನ್ನು ತುಂಬುವುದು.

1452 - ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ತಿಳಿಸುವರೇ?

ಅ) *ರಾಜ್ಯದಲ್ಲಿರುವ ತಹಶೀಲ್ದಾರ್ ವಿಶೇಷ ತಹಶೀಲ್ದಾರ್ ಮತ್ತು ಸಬ್ ರಿಜಿಸ್ಟ್ರಾರ್‌ಗಳ ಒಟ್ಟು ಹುದ್ದೆಗಳೆಷ್ಟು?*

ಆ) *ಇವುಗಳಲ್ಲಿ ಎಷ್ಟು ಹುದ್ದೆಗಳು ಖಾಲಿ ಇವೆ.*

ಇ) *ಈ ಖಾಲಿ ಇರುವ ಹುದ್ದೆಗಳನ್ನು ತುಂಬಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?*

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಮಂತ್ರಿಗಳು):

ಅ) ತಹಶೀಲ್ದಾರ್ ವಿಶೇಷ ತಹಶೀಲ್ದಾರ್ : 430

ಸಬ್‌ರಿಜಿಸ್ಟ್ರಾರ್ (ಮೊದಲನೆ ದರ್ಜೆ ಮತ್ತು ಎರಡನೇ ದರ್ಜೆ ಸೇರಿ) : 228

ಅ) ತಹಶೀಲ್ದಾರ್ : ವಿಶೇಷ ತಹಶೀಲ್ದಾರ್ : 6

ಸಬ್ ರಿಜಿಸ್ಟ್ರಾರ್ ಮೊದಲನೆ ದರ್ಜೆ : 4

ಇ) ವ್ಯಂದ ಮತ್ತು ನೇಮಕಾತಿ ನಿಯಮಗಳ ಪ್ರಕಾರ ತುಂಬಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಹಾಸನ ತಾಲ್ಲೂಕು ಸೋಮನಹಳ್ಳಿ ತೋಟಗಾರಿಕೆ ಫಾರಂ ಅಭಿವೃದ್ಧಿ

1699 - ಶ್ರೀ ಬಿ. ಶಿವರಾಮ್ (ಗಂಡಸಿ) : ಮಾನ್ಯ ಕೃಷಿ ಮತ್ತು ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನ ತಾಲ್ಲೂಕು ದುದ್ದ ಹೋಬಳಿ ಸೋಮನಹಳ್ಳಿ ಕಾವಲ್ ತೋಟಗಾರಿಕೆ ಫಾರಂನ ಒಟ್ಟು ಪ್ರದೇಶ ಎಷ್ಟು?

ಆ) 1987-88ರಿಂದ 1990-91ರವರೆಗೆ ಪ್ರತಿ ವರ್ಷ ಖರ್ಚು ಮಾಡಿರುವ ಹಣ ಎಷ್ಟು? ಮತ್ತು ಬಂದಿರುವ ಉತ್ಪತ್ತಿ ಏನು?

ಇ) ಈ ಫಾರಂನ ಮೂಲ ಉದ್ದೇಶವೇನು? ಮತ್ತು ಈ ಉದ್ದೇಶ ಸರ್ಕಾರಕ್ಕಾಗಲೀ ಅಥವಾ ರೈತರಿಗಾಗಲೀ ಸದ್ ವಿನಿಯೋಗವಾಗಿದೆಯೇ?

ಈ) ಈ ವರ್ಷದಲ್ಲಿ ಫಾರಂ ಅಭಿವೃದ್ಧಿಗಾಗಿ ಸರ್ಕಾರದ ವಿವಿಧ ಯೋಜನೆಗಾಗಿ ನಿಗಧಿ ಪಡಿಸಿದ ಗುರಿ ಯಾವುವು?

ಶ್ರೀ ಜೆ. ಪುಟ್ಟಸ್ವಾಮಿಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು) :

ಅ) 353 ಎಕರೆ 33 ಗುಂಟೆಗಳು

ಆ)

ವರ್ಷ	ಖರ್ಚು	ಉತ್ಪತ್ತಿ
1987-88	ರೂ.277120-00	ರೂ.55668-50
1988-89	191712-00	37556-00
1989-90	342314-40	46100-00
1990-91	251374-80	44210-00
(91ನೇ ಫೆಬ್ರುವರಿ ಅಂತ್ಯದವರೆಗೆ)		

ಇ) ಈ ಕ್ಷೇತ್ರದ ಮೂಲ ಉದ್ದೇಶ ರೈತರಿಗೆ ರೋಗರಹಿತ ಮತ್ತು ಹೆಚ್ಚು ಇಳುವರಿ ಕೊಡುವ ಬಿತ್ತನೆ ಆಲೂಗಡ್ಡೆ ಉತ್ಪಾದಿಸಿ ಹಾಸನ ಜಿಲ್ಲೆಯಲ್ಲಿ ಆಲೂಗಡ್ಡೆಯ ಪ್ರದೇಶ ಹಾಗೂ ಎಕರೆವಾರು ಇಳುವರಿ ಹೆಚ್ಚಿಸುವುದು. ಕೇಂದ್ರ ಆಲೂಗಡ್ಡೆ ಸಂಸ್ಥೆಯವರು ಕಂಡು ಹಿಡಿದಿರುವ ಹೊಸ ಜಾತಿಯ ಆಲೂಗಡ್ಡೆ ತಳಿಯನ್ನು ಪ್ರಯೋಗಿಕವಾಗಿ ಬೆಳೆದು ಈ ಪ್ರದೇಶದ ಹವಾಮಾನಕ್ಕೆ ಹೊಂದಿಕೊಳ್ಳುವ ಹಾಗೂ ಹೆಚ್ಚು ಇಳುವರಿಯನ್ನು ಹೆಚ್ಚಿಸುವುದು. ಆದರೆ ಕಂದು ರೋಗದ ಕಾರಣ ಹೆಚ್ಚಿನ ಪ್ರಮಾಣದಲ್ಲಿ ಬಿತ್ತನೆ ಆಲೂಗಡ್ಡೆ ಬೆಳೆಯಲಾಗುತ್ತಿಲ್ಲ. ಈಗ ಈ ಕಾರ್ಯವನ್ನು ನಿಲ್ಲಿಸಲಾಗಿದೆ. ಇತರೆ ಕಾರ್ಯವನ್ನು ನಿಲ್ಲಿಸಲಾಗಿದೆ. ಇತರೆ ಕಾರ್ಯಕ್ರಮಗಳು ಮುಂದುವರೆದು ಈ ಫಾರಂನಿಂದ ಸರ್ಕಾರಕ್ಕೆ ಹಾಗೂ ರೈತರಿಗೆ ಸುಪಯೋಗವಾಗುತ್ತಿದೆ.